# ಹಿಂಜರಿಕೆಯಿಂದ ಹಿನ್ನೆಡೆ ಆದರೆ ಯುವಮಿತ್ರ ಕಲಿಸಿತು ಪರಿವರ್ತನೆಯ ನಡೆ



ಜೋ ಸೈಮನ್, ಕಾರೇಹಳ್ಳಿ

ನನ್ನ ಎಲ್ಲಾ ಪ್ರೀತಿಯ ಯುವಮಿತ್ರರೇ ನಾವು ಹದಿಹರೆಯದವರು ಅಂದರೆ ಜೀವನದ ಹಾದಿ ತಿಳಿಯದವರು ನಮ್ಮ ನಮ್ಮ ಜೀವನದ ಮುಖ್ಯವಾದ ಗಳಿಗೆಯಲ್ಲಿ ಇರುವವರು. ನಮಗೆ ಆಯ್ಕೆಗಳು ಹೆಚ್ಚು, ಆದರೇ ಕೆಲವೊಂದು ಬಾರಿ ನಮ್ಮ ಆಯ್ಕೆಗಳು ಜೀವನವನೇ ಬೇಸರಗೊಳಿಸಬಹುದು. ಯೌವನವು ಜೀವಿತದ ಮುಖ್ಯವಾದ ಘಟ್ಟವಾಗಿದೆ. ನಾವು ಆರಿಸಿಕೊಳ್ಳುವ ಆಯ್ಕೆ ನಮ್ಮ ಭವಿಷ್ಯವನೇ ನಿರ್ಧರಿಸುತ್ತೇದೆ. ಈ ದೆಸೆಯಿಂದ ನಿಮಗೆ ಉಪಯುಕ್ತವಾಗುತ್ತದೆ ಎಂಬ ಕಾರಣಕ್ಕಾಗಿ ನಾನು ಇಲ್ಲಿ ನನ್ನ ಜೀವನದ ಕೆಲವು ಆಯ್ದ ಅನುಭವಗಳನ್ನು ನಿಮ್ಮಲ್ಲಿ ಹಂಚಿಕೊಳ್ಳಲು ಇಚ್ಚಿಸುತ್ತೇನೆ.

**ನನ್ನ ಯೌವನದ ಅಂದಿನ ಜೀವನ**

ನಾನು ಹುಟ್ಟಿ ಬೆಳೆದದು ಒಂದು ಪುಟ್ಟ ಹಳ್ಳಿಯಲ್ಲಿ ನನ್ನ ಧರ್ಮಕೇಂದ್ರವೂ ಸಂತ ಅಂತೋಣಿಯವರ ದೇವಾಲಯ ಕಾರೇಹಳ್ಳೀ. ನಾನು ಮೌನದಲ್ಲೆ ಸಮಯ ಕಳೆಯುವ ವ್ಯಕಿತ್ವದ ಸಾಧಾರಣ ವ್ಯಕ್ತಿ.  ಯಾರ ಸಂಗಡವೂ ಮಾತನಾಡಲು ಹೆದರಿಕೆ,  ಹಿಂಜರಿಕೆ, ವೇದಿಕೆಯ ಭಯ ಇವೆಲ್ಲವೂ ನನ್ನಲ್ಲಿ ಹೆಚ್ಚಾಗಿದವು. ನನಗೆ ಸ್ನೇಹಿತರು ಹೆಚ್ಚಾಗಿ ಇರಲಿಲ್ಲ. ಮನೆಯಲ್ಲಿಯೂ ಸಹ ಹೆಚ್ಚು ಮಾತನಾಡಲು ಹಿಂಜಯುಯುತ್ತಿದ ವ್ಯಕ್ತಿ ನಾನು. ನನ್ನ ವಿದ್ಯಾಭ್ಯಾಸದಲ್ಲಿ ಕೂಡ ಒಂದು ಸರಾಸರಿ ವಿದ್ಯಾರ್ಥಿ. ನನ್ನ ದಿನಚರಿ ಕೂಡ ಬಹಳ ಸರಳವಾಗಿತ್ತು. ಚರ್ಚ್‌ನಲ್ಲಿಯೂ ಸಹ ಯಾವುದೇ ಯುವಜನರ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಸಿಹಿಸುತ್ತಿರಲಿಲ್ಲ. ಶಿವಮೊಗ್ಗ ಧರ್ಮಕ್ಷೇತ್ರದ ಯುವಜನ ಆಯೋಗ 'ಯುವಮಿತ್ರ'ದ ಯಾವುದೇ ಶಿಬಿರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರಲಿಲ್ಲ ಕೆಲವೊಮ್ಮೆ ಒತ್ತಾಯದ ಮೇರೆಗೆ ಶಿಬಿರಗಳಿಗೆ ಹಾಜರಗುತ್ತಿದ್ದರೂ ಹಿಂಬದಿಯ ವ್ಯಕ್ತಿಯಾಗಿಯೇ ಉಳಿಯುತ್ತಿದೆ. ನನ್ನಲ್ಲಿ ಇದ್ದ ಹಿಂಜರಿಕೆ ನನ್ನನು ಹಿಂದೆಯೆ ಉಳಿಸಿತ್ತು.

**ಯುವಮಿತ್ರವೇ ನನಗೆ ಮೊದಲ ಪ್ರೇರಣೆ**

ಶಿವಮೊಗ್ಗ ಧರ್ಮಕ್ಷೇತ್ರದ ಯುವಜನ ಆಯೋಗದ ನಿರ್ದೇಶಕರು ಆದ ವಂದನೀಯ ಫಾದರ್ ಪಿಯುಸ್ ಡಿಸೋಜ ಹಾಗು  ಯುವಜನರು ಸೇರಿ ಆಯೋಜಿಸಿದ ಧಾನಕೂಟವೇ Rise Above  (ಪ್ರಜ್ವಲಿಸು) ಮನೋ-ಆಧ್ಯಾತ್ಮಿಕ ನವೀಕರಣ ಧ್ಯಾನಕೂಟವು ಇದಾಗಿತ್ತು. ಶಿವಮೊಗ್ಗ ಧರ್ಮಕ್ಷೇತ್ರದ ಇತಿಹಾಸದಲ್ಲಿ ಯುವಜನರಿಗೆಂದೇ ಆಯೋಜಿಸಿದ ವಿಭಿನ್ನ ಧ್ಯಾನಕೂಟ. ಈ ನವೀಕರಣ ಆಧ್ಯಾತ್ಮಿಕ ಧ್ಯಾನಕೂಟವೂ ಅನೇಕ ಯುವ-ಜನರ ಜೀವನವೇ ಬದಲಾಯಿಸಿತು. ಯುವಕರು-ಯುವತಿಯರು ಖಿನ್ನತೆಯಿಂದ ಹೊರಬಂದ ಸಾಕ್ಷಿಗಳು ಅನೇಕ. ಆ ಆನೇಕರಲ್ಲಿ ನಾನು ಸಹ ಒಬ್ಬ ಯುವಕ. ನನ್ನ ಜೀವನ ಪ್ರಜ್ವಲಗೊಳಿಸಿದ ಧ್ಯಾನಕೂಟ! ನನ್ನ  ಬಾಳಿಗೆ ಸ್ಪೂರ್ತಿಯಾದ ಧ್ಯಾನಕೂಟ!! ನನ್ನ ಹಿಂಜರಿಕೆ, ನನ್ನ ಭಯ ಎಲ್ಲವನೂ ಹೋಗಲಾಡಿಸಿದ ಮನೋ-ಆಧ್ಯಾತ್ಮಿಕ ಧ್ಯಾನಕೂಟ!!! ಒಂದೇ ದಿನದಲ್ಲಿ ಹೊಸ ವ್ಯಕ್ತಿಯಾಗಲು ಸಾಧ್ಯವಿಲ್ಲ ಆದರೆ ಯುವಮಿತ್ರ ನನಗೆ ಒಂದು ಅರ್ಥಗರ್ಭಿತವಾದ ವ್ಯಕಿಯಾಗಲು ಬೆಂಬಲಿಸಿದೆ. ದಿನದಿಂದ ದಿನಕ್ಕೆ ಒಂದೊಂದು ಹೊಸ ವಿಷಯವನ್ನು ಕಲಿಸುತ ಬಂದಿದೆ.

**ಪರಿವರ್ತನೆಯ ಮೊದಲ ಹೆಜ್ಜೆ**

ಇಂದಿನ ಕಾಲದಲ್ಲಿ ಅವಕಾಶಗಳೂ ಸಿಗುವುದು ಬಹಳ ವಿರಳ. ಸಿಕ್ಕರೂ ಅದು ಪ್ರತಿಭಾನಿತ್ವರು, ಆಕರ್ಷಕ ವ್ಯಕ್ತಿತ್ವ ಉಳ್ಳವರರಿಗೆ ಮಾತ್ರ. ಆದರೆ ಏನಾದರೂ ಸಾಧನೆ ಮಾಡಬೇಕು, ತಿಳಿದುಕೊಳ್ಳುವ ಹಂಬಲ ಇರುವ ವ್ಯಕ್ತಿಗೆ ಅವಕಾಶಗಳನ್ನು ಕಾಯುವುದರ ಬದಲು ಆವಕಾಶವನ್ನು ಹುಡುಕುವ ಮನೋಸ್ಥಿತಿ ಹಾಗೂ ಸಿಕ್ಕ ಪ್ರತೀ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ಸುಮನಸ್ಸು ಬಹಳ ಮುಖ್ಯ. ಅಂತೆಯೇ  ದೇವರ ಕೃಪೆಯಿಂದ ನನಗೆ ಸಿಕ್ಕ ಚೊಚ್ಚಲ ಅವಕಾಶ Youth Enlivening Program (ಯುವ ಉತ್ತೇಜನ ಶಿಬಿರ).  ಮೂರುದಿನಗಳ ಹೊರಾಂಗಳ ಶಿಬಿರದಲ್ಲಿ ಭಾಗಿಯಾಗುವ ಅವಕಾಶ ನನಗೆ ದೊರಕಿದ್ದು ನನ್ನ ಬಾಳಿನಲ್ಲಿ ಸಕಾರಾತ್ಮಕ ತಿರುವು ನೀಡಿತು. ಪರೀಕ್ಷೆ ಇದ್ದ ಕಾರಣ ಒಂದು ದಿನ ತಡವಾಗಿ ಭಾಗಿಯಾದ ನೋವಿದ್ದರೂ ಕೊನೆಯ ಎರಡು ದಿನಗಳು ಸಿಕ್ಕವಲ್ಲಾ ಎಂಬ ಸಂತೋಷ ನನಗಿದೆ. ಈ ಶಿಬಿರವೂ ಉಡುಪಿ ಧರ್ಮಕ್ಷೇತ್ರದ YCS/YSMನ ನಿರ್ದೇಶಕರಾದ ಫಾದರ್ ಎಡ್ವಿನ್ ಡಿಸೋಜ ಇವರು ಇತರ ಸಂಪನ್ಮೂಲ ತಂಡದ ಸದಸ್ಯರೊಂದಿಗೆ ನಡೆಸಿಕೊಟ್ಟರು. ಮೊದಲ ದಿನದಲ್ಲಿಯೇ ನಾನು ಎಲ್ಲರ ಜೊತೆಯಲ್ಲಿ ಬೆರೆತೆ ಎಲ್ಲರು ನನ್ನ ಸ್ನೇಹಿತರಾದರು ಮೊದಲ ಬಾರಿಗೆ ನಾನು ಮೌನಮುರಿದು ಮಾತನಾಡುವ ಇನ್ನೊಬ್ಬರೊಂದಿಗೆ ಬೆರೆತು ಬಾಳುವುದನ್ನು ಕಲಿಯುವ ವ್ಯಕ್ತಿಯಾದೆ. ಅಲ್ಲಿ ಕಲ್ಲಿತ ವಿಷಯಗಳೂ ನನ್ನ ಮನಸಲ್ಲಿ ಇಂದಿಗೂ ನೆಲೆಸಿದೆ.

ಕಲಿತ ವಿಷಯಗಳನ್ನು ನಾನು ಶಿಬಿರದ ಅಂತ್ಯದಲ್ಲಿ ಎಲ್ಲರಿಗೂ ತಮ್ಮ ತಮ್ಮ ಶಿಬಿರದ ಅನುಭವವನ್ನು ಹಂಚಿಕೊಳ್ಳಲು ಹೇಳಿದರು ನಾನು ಮೊದಲ ಬಾರಿಗೆ ವೇದಿಕೆಯನು ಹತ್ತಿ ಯಾವುದೇ ಭಯವಿಲ್ಲದೆ ನನ್ನ ಅನುಭವವನ್ನು ಹಂಚಿಕೊಂಡೆ. ಅಂದಿನ ಬೀಳ್ಕೋಡುಗೆ ಕಾರ್ಯಕ್ರಮಕ್ಕೆ ಶಿವಮೊಗ್ಗ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರು ಆದ ಆತೀ ವಂದನೀಯ ಫ್ರಾನ್ಸಿಸ್ ಸೆರವೊರವರು ಸಹ ಹಾಜರಿದರು. ಎಂದೂ ಯಾರ ಬಳಿಯಲ್ಲಿಯೂ ಮತಾನಾಡದ ನಾನು ಅಂದು ಎಲ್ಲರ ಮುಂದೆ ವೇದಿಕೆಯನು ಹತ್ತಿ ಮಾತನಾಡಿದೆ.ಇದಕ್ಕೆ ಕಾರಣ ಯುವಮಿತ್ರ. ಅಂದಿನಿಂದ ಇಂದಿನವರೆಗೂ ನನ್ನಲ್ಲಿ ಯಾವುದೇ ಭಯ,ಹಿಂಜರಿಕೆ ಯಾವುದು ಇಲ್ಲ. ನಾಲ್ಕು ಮಂದಿಯ ಮುಂದೆ  ನಿಂತು ಮಾತನಾಡುವುದು ಸುಲಭವಲ್ಲ.

**ಇಂದು ನಾನು; ನನ್ನ ಜೀವನ**

ಯುವಮಿತ್ರ ಆಯೋಜಿಸುವ ಎಲ್ಲಾ ಶಿಬಿರ, ಧ್ಯಾನಕೂಟ, ಸ್ಪರ್ಧೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ ಬಂದಿದ್ದೇನೆ. ಶಿವಮೊಗ್ಗ ಧರ್ಮಕ್ಷೇತ್ರದ ಯುವಜನ ಆಯೋಗದ ಯುವ ಸಂಪನ್ಮೂಲ ತಂಡದಲ್ಲಿ (Youth Resource Team) ನಾನು ಸಹ ಒಬ್ಬ ಸದಸ್ಯ ಎಲ್ಲಾ ಧರ್ಮಕೇಂದ್ರಗಳಿಗೂ ಬೇಟಿಕೊಡುತ್ತಾ ಅಲ್ಲಿನ ಯುವಜನರಿಗೆ ಪ್ರೇರಣೆಕೊಡುತ್ತಾ ಬರುತ್ತಿದ್ದೆವೆ. ಎಲ್ಲಾ ಯುವಕ–ಯುವತಿಯರನ್ನು ಉತ್ತೇಜಿಸುವ ಪ್ರಯತ್ನ ನಮ್ಮದು. ಸಂತೋಷ, ಸಂತೃಪ್ತಿ, ಸಹಾಯ–ಸಹಕಾರ ಹಾಗೂ ಇತರರೊಂದಿಗೆ ಬೆರೆತು ಕಲಿತು ನಲಿದು ಜೀವನದಲ್ಲಿ ಸಾಧನೆಯತ್ತಾ ಸಾಗುವ ಛಲ ಹೆಚ್ಚಿದೆ. ಅನುಭವವೂ ಚಟುವಟಿಕೆಗಳಲ್ಲಿ ಭಾಗವಹಿಸುವಾಗ ಹೆಚ್ಚುತ್ತಲಿದೆ.

**ಅನುಭವದ ಕಿವಿಮಾತು**

ಆತ್ಮೀಯ ಯುವಜನರೇ ಅವಕಶಾಗಳೂ ಸಿಗುವುದು ಬಹಳ ಕಡಿಮೆ. ಆದರೆ ಅವಕಾಶಗಳಿಗೆ ಬಿಡಾರ ನಮ್ಮ ಯುವಮಿತ್ರ. ನಿಮ್ಮ ಪ್ರತಿಭೆಗಳು ಅರಳಿಸಲು ಪ್ರೇರಣಾ ಶಕ್ತಿಕೇಂದ್ರವೇ ಯುವಮಿತ್ರ. ಇಲ್ಲಿ ಸಿಗುವ ಅವಕಾಶಗಳ ಪ್ರಯೋಜನ ಪಡೆಯುವುದು ನಮ್ಮ ಕರ್ತವ್ಯ. ನನಗೆ ಸಿಕ್ಕ ಅವಕಾಶದಿಂದ ನನ್ನ ಜೀವನವನೇ ಬದಲಾಯಿಸಿಕೊಂಡೆ. ನಿಮ್ಮ ನಿಮ್ಮ ಧರ್ಮಕೇಂದ್ರಗಳಲ್ಲಿ ಆಯೋಜಿಸುವ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಿರಿ. ಯುವಮಿತ್ರ ಆಯೋಜಿಸುವ ಎಲ್ಲಾ ಕಾರ್ಯಕ್ರಮಗಳಲ್ಲಿ ನೀವು ತಪ್ಪದೇ ಭಾಗವಹಿಸಿ ಭವಿಷ್ಯದ ಮೆಟಿಲ್ಲನ್ನು ಯುವಮಿತ್ರ ಜೊತೆಗೆ ಸೇರಿ ಹತ್ತಿ. ಯುವಜನರ ವಿಶ್ವಾಸವನ್ನು ಹೆಚ್ಚಿಸಲೂ ಮತ್ತು ವಿಶ್ವಾಸದ ಕಡೆಗೆ ಧನಾತ್ಮಕ ವರ್ತನೆಯನು ಯುವಜನರಲ್ಲಿ ಅಧಿಕರಿಸಲು ಧರ್ಮಸಭೆಯು ಯುವಜನರಿಗೆಂದೇ ನೀಡಿರುವ ಪುಸ್ತಕವೇ YOUCAT. ಇದನ್ನು ಯುವಜನರಾದ ನಾವು ಓದಬೇಕು ಮಾತ್ರವಲ್ಲಾ ಅಲ್ಲಿ ನಮ್ಮ ವಯಸ್ಸಿಗೆ ಮನದಲ್ಲಿ ಉದ್ಭವಿಸುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬಹುದು. ಇದು ನಮ್ಮ ಜೊತೆಗೆ ಇರಬೇಕಾದ ಪುಸ್ತಕ. ಇದು ಕನ್ನಡದಲ್ಲೂ ಲಭ್ಯವಿದೆ.